**ಅಸಲು ದಾವಾ ನಂಃ210/2012**
**ಪಿ.ಡಬ್ಲ್ಯೂ:01**

**ದಿನಾಂಕಃ 16-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಎಸ್., ಪ್ರತಿವಾದಿ ಪರ ವಕೀಲರಿಂದ**

ಪ್ರತಿವಾದಿ ಹೊನ್ನಮ್ಮ ಮೃತರಾಗಿ 3 ವರ್ಷಗಳಾಗಿದ್ದು ಅವರ ಕಾನೂನುಬದ್ದ ವಾರಸುದಾರರ ವಿರುದ್ದ ಈ ದಾವೆಯನ್ನು ತಂದಿರುತ್ತೇನೆ. ಪ್ರತಿವಾದಿ ನಂ.ಡಿ-1(ಎ) ಯಿಂದ (ಐ) ರವರು ಅವರ ಕಾನೂನುಬದ್ದ ವಾರಸುದಾರರ ಎಂದರೆ ಸರಿ. ನಮ್ಮ ಮನೆಯ ಪಕ್ಕದ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತೇನೆ. ನನ್ನ ಸ್ವತ್ತಿನ ಖಾತಾ ನಂ.441/ 483/835 ಎಂದು ಇರುತ್ತದೆ. ಸದರಿ ಸ್ವತ್ತು ಮನೆಯಾಗಿರುತ್ತದೆ. ಸದರಿ ಸ್ವತ್ತಿನ ವಿಸ್ತೀರ್ಣ 44 X 70 ಅಡಿ, ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ ನನಗೆ ನೆನಪಿಲ್ಲ. ಸದರಿ ಸ್ವತ್ತಿನ ಪೂರ್ವಕ್ಕೆ ನನ್ನ ಸಹೋದರ ರಾಘವರೆಡ್ಡಿಯವರ ಮನೆ, ಪಶ್ಚಿಮಕ್ಕೆ ಪ್ರತಿವಾದಿಯವರು ಖಾಲಿ ನಿವೇಶನ ಮತ್ತು ಮನೆ, ಉತ್ತರಕ್ಕೆ ಶಿವರೆಡ್ಡಿಯವರ ಮನೆ ಮತ್ತು ನಮ್ಮ ಮನೆಯ ಉಳಿಕೆಯ ಖಾಲಿ ಜಾಗ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಸ್ವತ್ತಿಗೆ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಕಂಪೌಂಡ್ ಬಂಡೆ ಇರುತ್ತದೆ ಎಂಬುದನ್ನು ವಾದ ಪತ್ರದ ಷೆಡ್ಯೂಲ್‌ನಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಕಂಪೌಂಡ್ ಬಂಡೆಗೆ ಮಾಲೀಕನಾಗದೆ ಇರುವ ಕಾರಣ ನಮೂದಿಸಿಲ್ಲ ಎಂದರೆ ಸಾಕ್ಷಿಯು ನಮೂದಿಸಿದೆ ಇದ್ದರೂ ನಾವು ಸದರಿ ಕಂಪೌಂಡ್ ಬಂಡೆಗೆ ಹಕ್ಕುದಾರರಾಗಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿಗೆ ನಾನೇ ಸಂಪೂರ್ಣ ಮಾಲೀಕ ಎಂಬುದು ಸುಳ್ಳು ಎಂದರೆ ಸರಿಯಲ್ಲ.

ದಿಃ02-02-2005 ರಂದು ನೋಂದಣಿ ಪಾಲುವಿಭಾಗದ ಮುಖಾಂತರ ನನಗೆ ದಾವಾ ಸ್ವತ್ತು ಬಂದಿರುತ್ತದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನಾನು ಮೊದಲನೇ ಮಹಡಿಯನ್ನು ನಿರ್ಮಾಣ ಮಾಡಲು ಲೈಸನ್ಸ್ ಪಡೆದಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಲೈಸನ್ಸ್ ನ್ನು ನ್ಯಾಯಾಲಯಕ್ಕೆ ವಕೀಲರು ಪ್ರಶ್ನಿಸಿದ ನಂತರ ಹಾಜರುಪಡಿಸಿರುತ್ತೇನೆ. ಲೈಸನ್ಸ್ ನ್ನು ಕೊಡುವ ಸಂದರ್ಭದಲ್ಲಿ ನಗರ ಪಾಲಿಕೆಯವರು ಕೆಲವು ಷರತ್ತುಗಳನ್ನು ವಿಧಿಸಿದ್ದು ಅವುಗಳನ್ನು ಹೇಳಲು ಸಾಧ್ಯವೇ ಎಂದರೆ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಲೈಸನ್ಸ್ ನ್ನು ನೀಡುವಾಗ ಕಟ್ಟಡದ 4 ಕಡೆ 3 ರಿಂದ 5 ಅಡಿ ಜಾಗವನ್ನು ಬಿಡಬೇಕೆಂದು ಷರತ್ತನ್ನು ವಿಧಿಸುತ್ತಾರೆ ಎಂದರೆ ಸರಿ. ನಮ್ಮ ಮನೆ ನಿರ್ಮಿಸಿರುವ, ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣ ಉದ್ದ ಅಳತೆಯನ್ನು ಹೇಳಲು

ಸಾಧ್ಯವಿಲ್ಲ.

ದಾವಾ ಸ್ವತ್ತನ್ನು ನಿರ್ಮಿಸುವಾಗ 4 ಕಡೆಯು ಖಾಲಿ ಜಾಗವನ್ನು ಬಿಡದೆ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಜಾಗವನ್ನು ಬಿಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ನೆಲ ಮಹಡಿಯಿಂದ ಒಂದನೇ ಮಹಡಿಯವರೆಗೂ ಪಶ್ಚಿಮ ದಿಕ್ಕಿನ ಗೋಡೆಯ ಪ್ಲಾಸ್ಟಿಂಗ್ ವರ್ಕ್ ನ್ನು ಮಾಡಲಾಗಿರುತ್ತದೆಯೇ ಎಂದರೆ ಸಾಕ್ಷಿಯು ನೆಲ ಮಹಡಿಯ ಪ್ಲಾಸ್ಟಿಂಗ್ ವರ್ಕ್ ಮುಗಿದಿದ್ದು ಒಂದನೇ ಮಹಡಿಯ ಪ್ಲಾಸ್ಟಿಂಗ್ ವರ್ಕ್ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು ಅದರಲ್ಲಿರುವ ಗೋಡೆಯು ದಾವಾ ಸ್ವತ್ತಿನ ಗೋಡೆ ಎಂದು ಗುರುತಿಸಿದ್ದು ಅದನ್ನು ನಿಡಿಃ5 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿರುವಂತೆ ದಾವಾ ಸ್ವತ್ತಿನ ಗೋಡೆಯನ್ನು ಈಗಲೂ ಪ್ಲಾಸ್ಟರಿಂಗ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಗೋಡೆಯನ್ನು ಪ್ಲಾಸ್ಟರಿಂಗ್ ಮಾಡುವ ವೇಳೆಯಲ್ಲಿ ನಿಡಿಃ1 ರಲ್ಲಿ ಕಾಣಿಸಿರುವ ಕಲ್ಲು ಬಂಡೆಗಳನ್ನು ಕಿತ್ತು ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಒಂದು ವರೆ ಅಡಿ ಜಾಗವನ್ನು ಬಿಟ್ಟು ಮನೆಯನ್ನು ನಿರ್ಮಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಒಂದು ವರೆ ಅಡಿ ಜಾಗದಲ್ಲಿನ ಬಂಡೆ ಕಲ್ಲುಗಳನ್ನು ಕಿತ್ತು ಹಾಕಿ ಪ್ಲಾಸ್ಟರಿಂಗ್ ಮಾಡಲು ನನಗೆ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿರುವ ಜಾಗಕ್ಕೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ನಮ್ಮ ಮನೆಯವರು ಪಶ್ಚಿಮ ದಿಕ್ಕಿನ ಜಾಗವನ್ನು ಸುಮಾರು ವರ್ಷಗಳಿಂದ ಅನುಭವಿಸುತ್ತಾ ಬಂದಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಶ್ರೀಮಂತರಾಗಿದ್ದು, ರಾಜಕೀಯವಾಗಿ ಪ್ರಭಲರಾಗಿದ್ದು ಮತ್ತು ಪೊಲೀಸರವರ ಬೆಂಬಲ ಹೊಂದಿದ್ದಾರ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರು ಜಗಳ ಮಾಡಿ ನನ್ನನ್ನು ಹೇದರಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ನಾನು 2 ಅಂತಸ್ತಿನ ಕಟ್ಟಡವನ್ನು ಹೊಂದಿರುತ್ತೇನೆ ಎಂದರೆ ಸರಿ. ನನಗೆ ನೂರಾರು ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು 3 ಎಕರೆ ಜಮೀನು ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬಡವ ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾಯರು ಎದುರು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ಕೌಂಟರ್ ಕ್ಲೇಮ್ ಷೆಡ್ಯೂಲ್ ಸ್ವತ್ತಿನಲ್ಲಿ ಚಳ್ಳಕೆರೆ ಮುನ್ಸಿಪಲ್ ಅಸೆಸ್ ಮೆಂಟ್ ನಂ. 717 ಚಾಲ್ತಿ ನಂ.487/444/836 ರಲ್ಲಿನ ಪೂ-ಪಃ100 ಅಡಿಗಳು, ಉ-ದಃ120 ಅಡಿಗಳುಳ್ಳ

ಸ್ವತ್ತಿನಲ್ಲಿರುವ ವಾಸದ ಮನೆ, ಔಟ್ ಹೌಸ್, ಬ್ಯಾಂಕ್ ಬಿಲ್ಡಿಂಗ್ ಹಾಗೂ ಕಾಂಪ್ಲೆಕ್ಸ್ ಮತ್ತು ಪೂರ್ವ ದಿಕ್ಕಿಗೆ ಇರುವ ಕಲ್ಲುಬಂಡೆಗಳು ಮತ್ತು ಆನಂತರದ ಒಂದು ವರೆ ಅಡಿಗಳ ಜಾಗ ಸೇರಿರುತ್ತದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ವಿವರಣೆಯು ಸರಿಯಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತಿನ ಪೂರ್ವಕ್ಕೆ ಕನ್ಸ್ ವೆನ್ಸಿ ಮತ್ತು ತಿಮ್ಮಾರೆಡ್ಡಿ ಮನೆ ಬರುತ್ತದೆ ಎಂದರೆ ಸಾಕ್ಷಿಯು ನನ್ನ ಮನೆ ಮತ್ತು ನನ್ನ ಸಹೋದರರ ಮನೆ ಬರುತ್ತದೆ ಎಂದು ಉತ್ತರಿಸುತ್ತಾರೆ. ತಿಮ್ಮಾರೆಡ್ಡಿ ಎಂದರೆ ನನ್ನ ಸಹೋದರ. ಸಾಕ್ಷಿಯು ಮುಂದುವರಿದು ಸದರಿ ಸ್ವತ್ತು ಮುಂಚೆ ನನ್ನ ಅಣ್ಣ ತಿಮ್ಮಾರೆಡ್ಡಿಯವರ ಹೆಸರಿನಲ್ಲಿದ್ದು ವಿಭಾಗವಾದ ನಂತರ ನನ್ನ ಹೆಸರಿಗೆ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯವರ ಸ್ವತ್ತು ಕಟ್ಟಡ ಮತ್ತು ಖಾಲಿ ನಿವೇಶವನ್ನು ಸೇರಿ ಉತ್ತರ-ದಕ್ಷಿಣ 112 ಅಡಿ ಉದ್ದವಿದ್ದು ಅದರಲ್ಲಿ 70 ಅಡಿ ಜಾಗದಷ್ಟು ಪೂರ್ವಕ್ಕೆ ನನ್ನ ಮನೆ ಇದ್ದು ಉಳಿಕೆ ಜಾಗದಲ್ಲಿ ಶಿವರೆಡ್ಡಿ ಎಂಬುವರು ಇರುತ್ತಾರೆ. ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ. ಉತ್ತರಕ್ಕೆ ವಿಜಯೇಂದ್ರರಾವ್ ಇವರ ಮನೆ ಬರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ಸದರಿ ಸ್ವತ್ತಿನ ಚೆಕ್ ಬಂದಿಯಲ್ಲಿ ಮುಂಚೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಕಾರ್ಯನಿರ್ವಹಿಸುತ್ತಿತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಪ್ರತಿವಾದಿಯು ದಿಃ29-11-1976 ರಂದು ಬಿ.ಕೆ.ಸುಬ್ಬರಾವ್ ಬಿನ್ ಲೇಟ್ ಕೃಷ್ಣರಾವ್ ಮತ್ತು ಇತರರ ಕಡೆಯಿಂದ ರೂ.49,000/- ಗಳಿಗೆ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕ್ರಯಪತ್ರದಲ್ಲಿರುವಂತೆ ಪ್ರತಿವಾದಿಯವರು ಖಾತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯರು ಖರೀದಿ ಮಾಡಿದ ದಿನದಿಂದಲೂ ಯಾವುದೇ ತಂಟೆ ತಕರಾರು ಇಲ್ಲದೆ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ.

ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ನಮಗೆ ಅಧಿಕಾರ ಇದೆ ಎಂದು ಹೇಳಿಲ್ಲ ಆದರೆ ಅವರು ಮುನ್ಸಿಪಾಲಿಟಿ ಖಾತೆಯ ವಿಸ್ತೀರ್ಣದಂತೆ ಮಾತ್ರ ಹಕ್ಕು ಅಧಿಕಾರವನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಮುನ್ಸಿಪಾಲಿಟಿಯವರು ಕ್ರಯಪತ್ರದಂತೆ ಯಾವುದೇ ಸ್ವತ್ತಿನ ಖಾತೆಯನ್ನು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮತ್ತು ಪ್ರತಿವಾದಿಯ ಮನೆಯನ್ನು ಕ್ರಯಪತ್ರದಂತೆ ಖಾತೆ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮನೆಯ ಕ್ರಯಪತ್ರದಲ್ಲಿ ಮನೆಯ ಒಟ್ಟು ವಿಸ್ತೀರ್ಣ 95 ಅಡಿ ಇದ್ದು ಅದನ್ನು ಖಾತೆಯಲ್ಲಿ 94 ಅಡಿ ಎಂದು ಮಾಡಿರುತ್ತಾರೆ. ಕ್ರಯಪತ್ರದಂತೆ ಖಾತಾ ಮಾಡಿರುವುದಿಲ್ಲ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಕಲ್ಲು ಬಂಡೆ ಮತ್ತು ನನ್ನ ಮನೆಯ ನಡುವೆ, ನಮಗೆ ಸೇರಿದ ಯಾವುದೇ

ಖಾಲಿ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ.

2012 ರಲ್ಲಿ ಕಲ್ಲು ಬಂಡೆಗಳನ್ನು ಕಿತ್ತು ಹಾಕಿ ಮನೆಯನ್ನು ನಿರ್ಮಾಣ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಬಂಡೆ ಕಲ್ಲುಗಳನ್ನು ಕಿತ್ತು ಹಾಕಿ, ದನ ಕರುಗಳು ಪ್ರವೇಶಿಸಲು ಅನುಕೂಲ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕಿರುಕುಳದಿಂದ ಪ್ರತಿವಾದಿ ಮತ್ತು ಆಕೆಯ ಗಂಡ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಕಿತ್ತು ಹಾಕಿದ ಬಂಡೆಗಳನ್ನು ಪ್ರತಿವಾದಿಯರು ಪುನಃ ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಬಂಡೆಗಳನ್ನು ಕಿತ್ತು ಹಾಕದೆ ಇರುವ ಕಾರಣ ಅವರು ಅದನ್ನು ಪುನಃ ನಿರ್ಮಿಸುವ ಅವಶ್ಯಕತೆ ಬರುವುದಿಲ್ಲವೆಂದು ಉತ್ತರಿಸುತ್ತಾರೆ. ಬಂಡೆಗಳನ್ನು ಕಿತ್ತು ಹಾಕಿದ ನಂತರ ಪ್ರತಿವಾದಿಯರು ಈ ಕೌಂಟರ್ ಕ್ಲೇಮ್ ದಾವಾವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಬಂಡೆ ಕಲ್ಲುಗಳನ್ನು ಕಿತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಎದುರು ಕೌಂಟರ್ ಕ್ಲೇಮ್ ನಲ್ಲಿ ಕೇಳಿರುವ ಪ್ರಾರ್ಥನೆಯನ್ನು ನನಗೆ ಹೇಳಲು ಸಾಧ್ಯವಿಲ್ಲ. ಸದರಿ ಪ್ರಾರ್ಥನೆಯಲ್ಲಿ ಅಕ್ರಮವಾಗಿ ಕಟ್ಟಿರುವ ಕಟ್ಟಡವನ್ನು ಕೆಡವುವಂತೆ ಕೇಳಿರುತ್ತಾರೆ ಎಂದರೆ ಸಾಕ್ಷಿಯು ಕೇಳಿರುವುದು ತಪ್ಪು ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೆ ಹಕ್ಕು ಅಧಿಕಾರ ಇಲ್ಲದೆ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ, ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ತೊಂದರೆಯನ್ನು ನೀಡದೆ ಇದ್ದರೂ ಸಹ ಸುಳ್ಳು ವ್ಯಾಜ್ಯ ಕಾರಣವನ್ನು ಸೃಷ್ಟಿಸಿರುವ ಕಾರಣ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.